

# ಈ ಹೊತ್ತಿನ ಆಮೆ–ಮೊಲದ ಕಥೆ

ಚುರುಕು ಮಕ್ಕಳು ಅನೇಕ ಸಂದರ್ಭಗಳಲ್ಲಿ ಮೊಲದ ಮರಿಗಳಂತೆ ವರ್ತಿಸುತ್ತಾರೆ. ಓಡುವ ಸಂದರ್ಭದಲ್ಲಿ ತೂಕಡಿಸಿದರೆ ಹೇಗೆ?

■ ಸ್ವಯಂಪ್ರಭಾ

ಓಟದ ಸ್ಪರ್ಧೆಯಲ್ಲಿ ಆಮೆ ಮತ್ತು ಮೊಲ ಭಾಗವಹಿಸಿದ ಕಥೆ ಯಾರಿಗೆ ಗೊತ್ತಿಲ್ಲ. ಎಷ್ಟು ಚಂದದ ಕಥೆ. ಯಾವುದೇ ವಿಷಯದ ಬಗ್ಗೆಯೂ ಅತಿಯಾದ ಆತ್ಮವಿಶ್ವಾಸ ಸರಿಯಲ್ಲ ಎಂಬ ನೀತಿಯನ್ನು ಹೇಳುವ ಕಥೆಯನ್ನು ಅಪ್ಪ ಅಮ್ಮನೋ ಶಿಕ್ಷಕರೋ ಮಕ್ಕಳಿಗೆ ಹೇಳಿರುತ್ತಾರೆ. ಸರಳ ಕಥೆಯೆಂದು ಇದನ್ನು ಪಕ್ಕಕ್ಕಿರಿಸಲು ಸಾಧ್ಯವಿಲ್ಲ. ಚಂಗಚಂಗನೆ ಓಡುವ ಮೊಲವನ್ನು ಸ್ಪರ್ಧೆಗೆ ಮುನ್ನವೂ ಆಮೆ ನೋಡಿಲ್ಲವೇ? ಮೊಲದ ಸಾಮರ್ಥ್ಯದ ಬಗ್ಗೆ ಅರಿವಿದ್ದೂ ಅದರೊಡನೆ ಸ್ಪರ್ಧೆಯಲ್ಲಿ ಭಾಗವಹಿಸಲು ಒಪ್ಪುವ ಆಮೆಯ ಮನಸ್ಥಿತಿಯ ಬಗ್ಗೆ ಈಗಲೂ ಅಚ್ಚರಿಯಾಗುತ್ತದೆ. ಒಂದೋ ಆಮೆಗೆ ತನ್ನ ಸ್ನೇಹಿತ ಮೊಲದ ಮರಿಯ ಉಡಾಫೆ ಬುದ್ಧಿಯ ಬಗ್ಗೆ ಚೆನ್ನಾಗಿ ಅರಿವಿರಬೇಕು. ಅಥವಾ ಪ್ರಯತ್ನ ಪಡೋಣ, ಏನಾದರೂ ಪವಾಡ ನಡೆದು ನಾನು ಗೆಲ್ಲಬಾರದೇಕೆ ಎಂಬ ಭರವಸೆಯ ಧ್ವನಿಯೊಂದು ಅಂತರಂಗದಲ್ಲಿ ಮೂಡಿರಬೇಕು. ಅಥವಾ ಮುಂದೇನಾಗುವುದು ಎಂಬುದನ್ನು ಚಿಂತಿಸದೇ ಈ ಕ್ಷಣಕ್ಕೆ ಸ್ಪಂದಿಸುವ ಆಮೆ ದೊಡ್ಡ ತತ್ವಜ್ಞಾನಿಯೇ ಆಗಿರಬೇಕು. ಈ ಊಹೆಗಳೇನೇ ಇರಲಿ, ಕಥೆಯು ನೆನಪಾಗಲು ಕಾರಣ, ಇತ್ತೀಚೆಗಿನ ಪುಟಾಣಿ ಮಕ್ಕಳ ಚುರುಕುತನ.

ಯಾರದ್ದೇ ಮನೆಯಲ್ಲಾಗಲೀ ಒಂದೇ ತೆರನಾದ ಮಾತುಗಳು: ಮಗ ಬಹಳ ಜಾಣ, ಮಗಳು ಸ್ಕೆಚ್ಚಿಂಗ್‌ನಲ್ಲಿ ಚುರುಕು, ಸಂಜೆಗೆ ಸ್ವಿಮ್ಮಿಂಗ್, ಬೆಳಗ್ಗಿನ ವೇಳೆ ಸ್ಕೇಟಿಂಗ್, ಮೊಬೈಲ್‌ನಲ್ಲಿ ಏನು ಗೊತ್ತಾಗುತ್ತಿಲ್ಲವೇ... ಚಿಂತೆಬಿಡಿ ನನ್ನ ಮಗಳು ಸರಿ ಮಾಡಿಕೊಡುತ್ತಾಳೆ... ಹೊಸ ಆ್ಯಪ್ ಬೇಕಿತ್ತಾ? ಅವನೇ ಎಲ್ಲ ತಿಳಿಸಿಕೊಡುತ್ತಾನೆ... ಫೋಟೊ ತೆಗೀಬೇಕಾ... ಮಕ್ಕಳು ಸೆಲ್ಫಿ ಭಾರೀ ಚೆಂದ ತಗೀತಾವೆ, ನಮಗೋ ಮೊಬೈಲೇ ಸರಿ ಹಿಡಿಯಕೆ ಬರಲ್ಲ...

ಚುರುಕು, ವೇಗ, ಓಟ... ಬದುಕನ್ನೇ ಸರಕ್ಕಂತ ಕ್ಷಣಾರ್ಧದಲ್ಲಿ ಮೊಬೈಲ್‌ನೊಳಗೆ ತೂರಿಸಿಬಿಡುತ್ತಾರೆ ಈ ಮಕ್ಕಳು! ಸಮಸ್ಯೆ ಇರುವುದೇ ಇವೆಲ್ಲಾ ಚಟುವಟಿಕೆಯ ನಂತರದ ಕ್ಷಣದಲ್ಲಿ – ಥೇಟ್ ಅದೇ ಮೊಲದ ಮರಿಯು ಮರದ ಕೆಳಗೆ ನಿದ್ದೆ ಮಾಡಿದ ಕಥೆಯಂತೆ.

‘ಜಲಪಾತ ನೋಡಬೇಕು’ ಎಂದು ಬಹಳ ವರ್ಷಗಳಿಂದ ಆಸೆಪಡುತ್ತಿದ್ದಳು ರಾಧಿಕಾ. ಒಂದು ದಿನ ಮನೆಯವರೆಲ್ಲ ಸೇರಿಕೊಂಡು ಜಲಪಾತ ನೋಡಲು ಹೋದರು. ಮಗ ರಾಹುಲ್‌ಗೆ ಜಲಪಾತವನ್ನು ವಿವಿಧ ರೀತಿಯಲ್ಲಿ ಸೆರೆ ಹಿಡಿದು ಖುಷಿಯಾಯಿತು. ಜಲಪಾತದವರೆಗೆ ಪ್ರಯಾಣಿಸುವ ಕ್ಷಣಗಳನ್ನೂ ಸೆರೆಹಿಡಿದು ಖುಷಿಪಟ್ಟ. ಜಲಪಾತದ ನೀರಿನಲ್ಲಿ ಚೆನ್ನಾಗಿ ಆಟವಾಡಿದ ಬಳಿಕ ಅವನು ಕಾರಿನೊಳಗೆ ತೂರಿಕೊಂಡು ವಿಡಿಯೊ ಎಡಿಟಿಂಗ್ ಮಾಡಲು ಶುರು ಮಾಡಿದ್ದ. ಚಿಕ್ಕದೊಂದು ಕ್ಲಿಪ್ಪಿಂಗ್ ವಾಟ್ಸಾಪ್ ಸ್ಟೇಟಸ್‌ಗೆ, ಮತ್ತೊಂದು ಇನ್‌ಸ್ಟಾಗ್ರಾಂಗೆ, ಒಂದೆರಡು ಫೋಟೊಗಳು ಸ್ನಾಪ್ ಚಾಟ್‌ನಲ್ಲಿ, ಮತ್ತೆರಡು ವಿಡಿಯೊ ಸ್ಟೋರಿಗಳು... ಅರೆ, ಪಿಕ್‌ನಿಕ್ ಇನ್ನೂ ಮುಗಿದಿಲ್ಲ, ಆದರೆ ಮಗ ಇದ್ದಕ್ಕಿದ್ದ ಹಾಗೆಯೇ ಪಿಕ್‌ನಿಕ್‌ನಿಂದ ಅರ್ಧದಲ್ಲೇ ಮನೆಗೆ ಹೊರಟುಹೋದಂತೆ ರಾಧಿಕಾಳಿಗೆ ಅನಿಸಿತು.

ಮನೆಗೆ ಬಂದ ಮೇಲೆಯೂ ವಿಡಿಯೊ ಎಡಿಟಿಂಗ್, ಬಂದಿರುವ ಕಮೆಂಟ್‌ಗಳನ್ನು ಓದುವುದು, ಅದಕ್ಕೆ ಪ್ರತಿಯಾಗಿ ಸ್ನೇಹಿತರು ಹಾಕಿದ ಸ್ಟೋರಿಗಳನ್ನು ನೋಡುವುದು, ಎಷ್ಟು ಮಂದಿ ತನ್ನ ಸ್ಟೋರಿ ಶೇರ್ ಮಾಡಿದರೆಂದು ತಲೆಬಿಸಿ ಮಾಡಿಕೊಂಡು ತನ್ನ ರೂಮಿನಲ್ಲಿ ಬಂಧಿಯಾಗಿದ್ದ. ಒಂದಿಷ್ಟು ಬೆಚ್ಚಗೆ ಸ್ನಾನ ಮಾಡಿ, ಬಟ್ಟೆ ಬದಲಿಸಿಕೊಂಡು ಊಟಕ್ಕೆ ಬಾರೋ ಎಂದು ಹೇಳಿ ರಾಧಿಕಾಳಿಗೆ ಸುಸ್ತಾಗಿ ಹೋಯಿತು. ಅಂತೂ ಅಪ್ಪನೇ ಅವನನ್ನೆತ್ತಿ ಬಚ್ಚಲು ಮನೆಯ ಶವರ್ ಕೆಳಗೆ ನಿಲ್ಲಿಸಿದ್ದಾಯಿತು. ಅಲ್ಲಿಯೂ ಸ್ಪಾಟಿಫೈ ಹಾಡುಗಳನ್ನು ಹಾಕಿಲ್ಲವೆಂದು ಸ್ನಾನ ಮಾಡಲು ತಗಾದೆ ಮಾಡಿದ್ದಾಯಿತು.

ಎಲ್ಲ ಸವಲತ್ತುಗಳೂ ಇವೆ. ಓಡಾಡಲು ಕಾರು, ಓದಲು ಬೇಕಾದಷ್ಟು ಪುಸ್ತಕಗಳು, ಉಂಡುಟ್ಟು ನಲಿಯಲು ತಕ್ಕಷ್ಟು ಸಂಪತ್ತು ಇದ್ದರೂ ಸಮಯದ ಅಗತ್ಯಕ್ಕೆ ತಕ್ಕಂತೆ ಬಾಳುವ ಮಾಡುವ ಕೌಶಲವನ್ನು ಮಕ್ಕಳಿಗೆ ಹೇಗೆ ತಿಳಿಸಿಕೊಡುವುದು ಎಂದು ರಾಧಿಕಾ ಆಗಾಗ ತಲೆಮೇಲೆ ಕೈ ಹೊತ್ತು ಕುಳಿತುಬಿಡುತ್ತಾಳೆ. ಇದಕ್ಕೆ ಪರಿಹಾರ ರೂಪವಾಗಿ ಯಾವುದೋ ಒಂದು ಸಿದ್ಧ ಉತ್ತರವು ಸಿಗುವುದಿಲ್ಲ. ಎಲ್ಲರ ಮನೆಯಲ್ಲಿಯೂ ಮಕ್ಕಳು ಹೀಗೆಯೇ ವರ್ತಿಸುತ್ತಾರಲ್ಲಾ... ಎನ್ನುವ ಹುಸಿ ಸಮಾಧಾನವನ್ನು ತಂದೆ ತಾಯಿ ತಂದುಕೊಳ್ಳುತ್ತಾರೆ. ‘ನಿಜಕ್ಕೂ ಹೇಳಿ, ಮಕ್ಕಳು ಫಾಸ್ಟಾ... ಅಪ್ಪ ಅಮ್ಮನೇ ಫಾಸ್ಟಾ...’ ಎಂದು ರಾಧಿಕಾಳನ್ನು ಯಾರಾದರೂ ಗಟ್ಟಿಸಿ ಕೇಳಿದರೆ, ರಾಧಿಕಾ ಏನೂ ಉತ್ತರಿಸುವ ಸ್ಥಿತಿಯಲ್ಲಿ ಇಲ್ಲ. ಅವಳಿಗೆ ಆಮೆ ಮತ್ತು ಮೊಲದ ಮರಿಯ ಓಟದ ಸ್ಪರ್ಧೆಯ ಕಥೆಯೇ ನೆನಪಾಗುತ್ತದೆ. ಮೊಲದ ಮರಿಗಳಂತೆ ಚೆಂದದ ಚುರುಕು ಮಕ್ಕಳಿವರು. ಮೊಲದ ಮರಿಗೆ ಬುದ್ಧಿ ಬಂದ ಹಾಗೆ ಇವರಿಗೆಂದು ಅರಿವು ಮೂಡುವುದು?

ಪ್ರತಿಕ್ರಿಯಿಸಿ: feedback@sudha.co.in